# ಅನುಭಾವಿ ರವಿದಾಸರು

**ಸ್ವಾಮಿ ವೀರೇಶಾನಂದ**



ಭಾರತದ ಇತಿಹಾಸದಲ್ಲಿ ೧೫–೧೬ನೆಯ ಶತಮಾನದಲ್ಲಿ ನಡೆದ ಭಕ್ತಿ ಆಂದೋಲನವು ಪ್ರಮುಖವಾದುದು. ಈ ಆಂದೋಲನವು ಇಂದಿನ ಪಂಜಾಬ್, ಉತ್ತರ ಪ್ರದೇಶ, ರಾಜಸ್ಥಾನ ಮತ್ತು ಮಹಾರಾಷ್ಟ್ರಗಳಲ್ಲಿ ಮುಖ್ಯವಾಗಿ ಜರುಗಿತು. ಅನೇಕ ಸಂತರು, ಮಹಾತ್ಮರು ಇದರ ರೂವಾರಿಗಳಾಗಿದ್ದರು. ಇವರಲ್ಲಿ ರವಿದಾಸರೂ ಒಬ್ಬರು. ಹುಟ್ಟಿನಿಂದ ಚಮ್ಮಾರರಾದರೂ ಭಕ್ತಿಯಿಂದ ಮಹಾನ್ ಸಂತರಾಗಿ ಬೆಳೆದ ಈ ಪುಣ್ಯಪುರುಷನ ಕಥೆ ಮಂಗಳಪ್ರದವಾದುದು, ಮನಸ್ಸನ್ನು ಪರಿಶುದ್ಧ ಮಾಡುವಂಥದ್ದು. ಅಲ್ಲದೆ, ರವಿದಾಸರನ್ನು ಸಿಖ್ ಪಂಗಡದವರೂ ಪೂಜ್ಯಭಾವನೆಯಿಂದ ನೋಡುತ್ತಾರೆ; ಭಗವದ್ಭಕ್ತರೆಂದು ಕೊಂಡಾಡುತ್ತಾರೆ. ಅವರ ಹಲವಾರು ರಚನೆಗಳು ಸಿಖ್ ಧರ್ಮದ ಪುಣ್ಯಗ್ರಂಥವಾದ 'ಗುರು ಗ್ರಂಥ ಸಾಹಿಬ್'ನಲ್ಲಿ ಅಡಕವಾಗಿವೆ.

## ಬಾಲ್ಯ ಮತ್ತು ಯೌವನ

ರವಿದಾಸರು ಹುಟ್ಟಿದ್ದು ಕ್ರಿ.ಶ. ೧೩೭೭ ನೆಯ ಇಸವಿಯಲ್ಲಿ. ಅವರ ಜನ್ಮಸ್ಥಾನ ಪವಿತ್ರ ಕಾಶಿ ನಗರದ ಸನಿಹದಲ್ಲಿಯೇ ಇರುವ ಶ್ರೀ ಗೋವರ್ಧನಪುರ ಎಂಬ ಚಿಕ್ಕ ಗ್ರಾಮ. ತಂದೆಯ ಹೆಸರು ಸಂತೋಖ್ ದಾಸ್; ತಾಯಿ ಕಲಸೀ ದೇವಿ.

ರವಿದಾಸರ ತಂದೆ ಚರ್ಮದ ಮಾರಾಟಗಾರರು. ಸ್ಥಿತಿವಂತರು. ರವಿದಾಸ ಕೇವಲ ಐದು ದಿನಗಳ ಮಗುವಾಗಿದ್ದಾಗ, ಭಕ್ತಿ ಆಂದೋಲನದ ಮುಖ್ಯ ಪ್ರವರ್ತಕರಾದ ರಾಮಾನಂದರು ಅವರ ಮನೆಗೆ ಭೇಟಿಕೊಟ್ಟರು. ಮಗುವನ್ನು ಆಶೀರ್ವದಿಸಿದರು. ಮಗನು ಬೆಳೆದು ದೊಡ್ಡವನಾದನು. ಕುಟುಂಬದ ಉದ್ಯೋಗವನ್ನು ಕೈಗೊಳ್ಳುವಂತೆ ತಂದೆ ಪ್ರೇರೇಪಿಸಿದನು. ರವಿದಾಸನದು ವೈರಾಗ್ಯ ಪ್ರವೃತ್ತಿ. ಅವನು ಮಾನವೀಯತೆಯ ಗುಣಗಳಿಂದ ಕೂಡಿದ್ದನು. ವಾಣಿಜ್ಯ ವ್ಯವಹಾರಕ್ಕಾಗಿ ತಂದೆ ಕೊಟ್ಟ ಹಣವನ್ನು ಸಂತರು ಮತ್ತು ಬಡವರಿಗೆ ಹಂಚಿಬಿಟ್ಟನು. ಇದರಿಂದ ಅವನ ತಂದೆಗೆ ಬಹಳ ಕೋಪಬಂತು. ಮಗನನ್ನು ಮನೆಯಿಂದ ಓಡಿಸಿಬಿಟ್ಟನು. ರವಿದಾಸನು ತಂದೆಯ ವಿರುದ್ಧ ಯಾವ ಕೋಪತಾಪವನ್ನೂ ತಾಳದೆ, ಮನೆಯಿಂದ ಹೊರಟುಹೋದನು. ಇಷ್ಟರ ಒಳಗೆ ರವಿದಾಸನಿಗೆ ಮದುವೆಯಾಗಿತ್ತು. ಅವನು ತನ್ನ ಹೆಂಡತಿ ಲೋನಾಳ ಜೊತೆಗೆ ಒಂದು ಸಣ್ಣ ಗುಡಿಸಿಲಿನಲ್ಲಿ ತಂಗಿದನು. ದಾರಿಬದಿಯಲ್ಲಿ, ಚಪ್ಪಲಿಗಳನ್ನು ಹೊಲಿಯುವ ಗೂಡಂಗಡಿಯನ್ನು ಮಾಡಿಕೊಂಡು, ತನ್ನ ಕಾಯಕವನ್ನು ಆರಂಭಿಸಿದನು.

ಕಾಯಕವೇನೇ ಇರಲಿ, ಅವನ ಮನಸ್ಸು ಭಗವಂತನ ಆನಂದದಿಂದ ತುಂಬಿಹೋಗಿತ್ತು. ತನ್ನ ಕಾವ್ಯಧಾರೆಯ ಮೂಲಕ ಅದನ್ನು ಅವನು ವ್ಯಕ್ತಪಡಿಸುತ್ತಿದ್ದನು. ಮಣ್ಣಿನಲ್ಲಿಯೇ ಒಂದು ಮಂದಿರವನ್ನು ಕಟ್ಟಿದನು. ಹುಲ್ಲಿನ ಛಾವಣಿಯನ್ನು ನಿರ್ಮಿಸಿದನು. ಚರ್ಮದ ವಿಗ್ರಹವನ್ನು ಅಲ್ಲಿ ಪ್ರತಿಷ್ಠಾಪಿಸಿದನು. ಅವನ ಅಪೂರ್ವ ಭಕ್ತಿ ಮತ್ತು ಉದಾರ ಮಾನವೀಯ ಪ್ರೇಮಗಳಿಂದ ನೂರಾರು ಜನರು ಅವನೆಡೆಗೆ ಆಕರ್ಷಿತರಾದರು.

## ಆಧ್ಯಾತ್ಮಿಕ ಚೇತನವಾಗಿ ರವಿದಾಸರು

ಇದರಿಂದ ಅಲ್ಲಿನ ಸಂಪ್ರದಾಯಸ್ಥ ಬ್ರಾಹ್ಮಣರು ಕೋಪಗೊಂಡರು. ಹೊಟ್ಟೆಕಿಚ್ಚಿನಿಂದ ಕಾಶಿಯ ರಾಜನಾದ ನಗರಮಲ್‌ನಿಗೆ ದೂರುಕೊಟ್ಟರು. ಕೀಳುಕುಲದಲ್ಲಿ ಹುಟ್ಟಿದ ಶೂದ್ರನೊಬ್ಬನು ವಿಗ್ರಹಾರಾಧನೆ ಮಾಡುವುದು ಮಹಾನ್ ಅಪರಾಧ ಎಂದು ಅವರು ರಾಜನಿಗೆ ಮನವಿ ಸಲ್ಲಿಸಿದರು. ರಾಜ ನ್ಯಾಯಭೀರು. ರವಿದಾಸರಿಗೆ ವಿವರಣೆ ನೀಡುವಂತೆ ಕೇಳಿಕೊಂಡನು. ರವಿದಾಸರು ಬಹಳ ವಿನಯದಿಂದಲೇ ಉತ್ತರಿಸಿದರು: ''ಜಾತಿ-ಮತಗಳು ಮನುಷ್ಯನು ಸೃಷ್ಟಿಸಿದ್ದೇ ಹೊರತು, ಭಗವಂತ ಸೃಜಿಸಿದ್ದಲ್ಲ. ಹೀಗಾಗಿ ಭಗವಂತನನ್ನು ಪೂಜಿಸುವುದಕ್ಕೆ ಯಾವ ನಿರ್ಬಂಧವೂ ಇಲ್ಲ'' ಎಂಬ ವಿವರಣೆಯನ್ನು ನೀಡಿದರು.

ರಾಜನು ಇದರ ನಿರ್ಧಾರವನ್ನು ಭಗವಂತನಿಗೇ ಬಿಟ್ಟು ಬಿಟ್ಟನು. ದೇವರ ವಿಗ್ರಹವನ್ನು ದರ್ಬಾರ್ ಹಾಲಿನ ಮಧ್ಯದಲ್ಲಿ ಇರಿಸಿದನು. ಇಬ್ಬರು ಪಕ್ಷದವರಿಗೂ ತಮ್ಮ ಭಕ್ತಿಯ ಶಕ್ತಿಯ ಮೂಲಕ ಭಗವಂತನನ್ನು ಆಕರ್ಷಿಸುವಂತೆ ಕೇಳಿಕೊಂಡನು. ಬ್ರಾಹ್ಮಣ ಪುರೋಹಿತರು ತಮ್ಮ ಮಂತ್ರೋಚ್ಚಾರಣೆ ಮತ್ತು ವೇದ ಪಾರಾಯಣಗಳ ಮೂಲಕ ಭಗವಂತನನ್ನು ಸೆಳೆಯಲು ಪ್ರಯತ್ನಿಸಿದರು. ಇದರಿಂದ ಏನೂ ಪ್ರಯೋಜನವಾಗಲಿಲ್ಲ. ಇದಾದ ಮೇಲೆ ರವಿದಾಸರು ಮುಂದೆ ಬಂದರು. ಭಕ್ತಿಭಾವದಿಂದ ಈ ಕೆಳಗಿನ ಗೀತೆಯನ್ನು ಹಾಡಿದರು:

'ಪ್ರಭೂ, ನನ್ನ ಜೀವನವು ತಪ್ಪು ಮಾರ್ಗದಲ್ಲಿ ಸಾಗದಂತೆ ಮಾಡದಿರು. ನೀನೋ, ದೂರದಲ್ಲಿ ನಿಂತು ಸಾಕ್ಷಿಯಾಗಿ ನೋಡುತ್ತಿರುವೆ. ಆದರೆ ಇಲ್ಲಿ, ಕಾಶಿಯಲ್ಲಿ ಜನಗುಂಗುಳಿ ನೆರೆದಿದೆ. ಭಕ್ತರ ಸಭೆ ಕೂಡಿದೆ. ದಯವಿಟ್ಟು ದೀನರಕ್ಷಕ ಮತ್ತು ದರಿದ್ರಪಾಲಕನೆಂಬ ನಿನ್ನ ಕೀರ್ತಿಯನ್ನು ಉಳಿಸಿಕೋ. ಹೀಗೆಂದು ಈ ಬಡ ಚಮ್ಮಾರ ರವಿದಾಸ ಬೇಡಿಕೊಳ್ಳುತ್ತಿದ್ದಾನೆ.

' ಓ ದೇವರ ದೇವ! ನಾನು ನಿನ್ನ ಆಶ್ರಯವನ್ನು ಪಡೆದಿದ್ದೇನೆ. ನನ್ನನ್ನು ನಿನ್ನವನೆಂದೇ ಭಾವಿಸಿ ದಯವಿಟ್ಟು ನನ್ನ ಮೇಲೆ ಕರುಣೆಯನ್ನು ತೋರಿಸು. ನಿನ್ನ ನಾಮದಲ್ಲಿ ನಂಬಿಕೆಯನ್ನು ಇಟ್ಟು, ನಾನು ಬೇರೆಲ್ಲದರಲ್ಲೂ ಆಸೆಯನ್ನು ಬಿಟ್ಟುಬಿಟ್ಟಿದ್ದೇನೆ. ಪ್ರಾಪಂಚಿಕ ಆಚರಣೆಗಳಲ್ಲಿ ನನಗೆ ಯಾವ ಸಮಾಧಾನವೂ ಸಿಗುತ್ತಿಲ್ಲ. ನಿನ್ನ ದಾಸನಾದ ರವಿದಾಸನ ಸೇವೆಯನ್ನು ದಯವಿಟ್ಟು ಸ್ವೀಕರಿಸು, ಪ್ರಭೂ!'

ಹೃದಯಂಗಮವಾದ ಪ್ರಾರ್ಥನೆ ಇದಾಗಿತ್ತು. ಪ್ರಾರ್ಥನೆ ಮುಗಿದೊಡನೆ, ಭಗವಂತನ ವಿಗ್ರಹವು ಗುರು ರವಿದಾಸರ ಹತ್ತಿರ ತಾನೇತಾನಾಗಿ ಬಂದು ತೊಡೆಯ ಮೇಲೆ ಕುಳಿತುಕೊಂಡಿತು. ಇಷ್ಟು ಮಾತ್ರವಲ್ಲ. ರವಿದಾಸರು ತಮ್ಮ ಎದೆಯ ಚರ್ಮವನ್ನು ಹರಿದು, ಹೃದಯಲ್ಲಿರುವ ನಿಜವಾದ ಹೊಳೆಯುವ ಬಂಗಾರದ ಜನಿವಾರವನ್ನು ತೋರಿಸಿದರಂತೆ. ಹೃದಯದಲ್ಲಿರುವ ಜ್ಞಾನದ ಬೆಳಕೇ ನಿಜವಾದ ಯಜ್ಞೋಪವೀತವಾಗಿದೆ; ಹೊರಗಡೆ ಹಾಕಿಕೊಳ್ಳುವ ದಾರದ ಜನಿವಾರವಲ್ಲ ಎಂದು ತೋರಿಸಿಕೊಡುವುದು ರವಿದಾಸರ ಉದ್ದೇಶವಾಗಿತ್ತು.

ರವಿದಾಸರು ತೋರಿಸಿದ ಆಂತರಿಕ ಜ್ಯೋತಿಯ ಬೆಳಕು ಅಲ್ಲಿದ್ದವರ ಕಣ್ಣನ್ನು ಕುಕ್ಕಿತು. ಅವರೆಲ್ಲರೂ ಅವಾಕ್ಕಾದರು. ಈ ಸಂದರ್ಭದಲ್ಲಿ ರಾಜ ನಗರಮಲ್ ದಿವ್ಯಾನಂದಭರಿತನಾದನು. ಭಗವಂತನೇ ಈ ವಿವಾದವನ್ನು ಹೀಗೆ ಪರಿಹರಿಸಿದ್ದಾನೆ ಎಂದು ನಿರ್ಧರಿಸಿದನು. ಸ್ವತಃ ತಾನು ಗುರು ರವಿದಾಸರ ಶಿಷ್ಯನಾದನು. ಅಲ್ಲಿ ನೆರೆದಿದ್ದ ಬ್ರಾಹ್ಮಣರೆಲ್ಲರೂ ಮಹಾತ್ಮರ ಅನುಯಾಯಿಗಳಾದರು. ಇಷ್ಟಲ್ಲದೆ, ಎಲ್ಲರೂ ಸೇರಿ ರವಿದಾಸರನ್ನು ಪಲ್ಲಕ್ಕಿಯಲ್ಲಿ ಕೂರಿಸಿ ಮೆರವಣಿಗೆ ಮಾಡಿದರು.

ಇದೇ ಬಗೆಯ ಇನ್ನೊಂದು ಘಟನೆಯನ್ನು ನಾವು ರವಿದಾಸರ ಜೀವನದಲ್ಲಿ ನೋಡುತ್ತೇವೆ. ಬ್ರಾಹ್ಮಣರು ಪೂಜೆ ಮಾಡುವಂತೆ, ರವಿದಾಸರೂ ಸಾಲಿಗ್ರಾಮವನ್ನು ಪೂಜಿಸುತ್ತಿದ್ದಾರೆ ಎಂಬ ವದಂತಿ ಹಬ್ಬಿತು. ಇದರ ಬಗ್ಗೆ ಬ್ರಾಹ್ಮಣರು ಕಾಶಿಯ ರಾಜನಿಗೆ ದೂರುಕೊಟ್ಟರು. ನಾನು ಯಾವುದೇ ಸಾಲಿಗ್ರಾಮವನ್ನು ಪೂಜಿಸುತ್ತಿಲ್ಲ. ಚಪ್ಪಲಿಗಳನ್ನು ರಿಪೇರಿ ಮಾಡುವ ಕಲ್ಲೇ ನನಗೆ ಪೂಜ್ಯವಾದ ಕಲ್ಲು ಎಂದು ವಿವರಣೆ ನೀಡಿದರು. ಅದಕ್ಕಾಗಿ ಒಂದು ಪರೀಕ್ಷೆಯನ್ನು ರಾಜನು ನಡೆಸಿದನು. ಮೊದಲು ಬ್ರಾಹ್ಮಣರು ತಾವು ಪೂಜಿಸುತ್ತಿದ್ದ ಸಾಲಿಗ್ರಾಮಗಳನ್ನು ನದಿಯಲ್ಲಿ ಬಿಟ್ಟರು. ಅವೆಲ್ಲ ತೇಲದೆ, ಮುಳುಗಿಹೋದವು. ನಂತರ ರವಿದಾಸರು ತಮ್ಮ ಕೆಲಸದ ಕಲ್ಲನ್ನು ನದಿಯಲ್ಲಿ ಬಿಟ್ಟರು. ಅದು ಮುಳುಗದೆ ತೇಲಲು ಆರಂಭಿಸಿತು. ಬ್ರಾಹ್ಮಣರು ರವಿದಾಸರನ್ನು ಅವಮಾನಪಡಿಸಲು ಹವಣಿಸಿಕೊಂಡಿದ್ದರು. ಆದರೆ ಅದಕ್ಕೆ ಬದಲಾಗಿ ಅವರೇ ಅಪಮಾನಿತರಾದರು.

## ರವಿದಾಸರ ಸಾತ್ವಿಕ ಜೀವನ

ಗುರು ರವಿದಾಸರ ಹಲವಾರು ಮಂದಿ ಶಿಷ್ಯರು ಶ್ರೀಮಂತ ಕುಟುಂಬಗಳಿಗೆ ಸೇರಿದವರು. ಅವರು ತಮ್ಮ ಗುರುವಿಗೆ ಬೆಲೆ ಬಾಳುವ ಕೊಡುಗೆಗಳನ್ನು ನೀಡುತ್ತಿದ್ದರು. ಆದರೆ ಗುರೂಜಿ ಅವನ್ನೆಲ್ಲ ತಿರಸ್ಕರಿಸಿಬಿಟ್ಟರು. ತಮ್ಮ ವಂಶಾರ್ಜಿತ ಕಾಯಕವನ್ನು ಮುಂದುವರಿಸಿಕೊಂಡು ಹೋದರು. ಯಾವತ್ತೂ ಸಂತೋಷಚಿತ್ತರಾಗಿರುತ್ತಿದ್ದರು. ತಮ್ಮ ಕಾಯಕದಿಂದ ತಾವು ಸಂಪಾದಿಸಿದ್ದರಲ್ಲೇ ತೃಪ್ತಿಯಿಂದ ಜೀವನ ನಡೆಸುತ್ತಿದ್ದರು. ಹೀಗೆ '**ಯದೃಚ್ಛಾ ಲಾಭ ಸಂತುಷ್ಟೋ ದ್ವಂದ್ವಾತೀತೋ ವಿಮತ್ಸರಃ**' ಎಂಬ ಭಗವದ್ಗೀತೆಯ ಆದರ್ಶವನ್ನು ರವಿದಾಸರು ಪರಿಪೂರ್ಣವಾಗಿ ಪರಿಪಾಲಿಸುತ್ತಿದ್ದರು.

ಒಮ್ಮೆ ಒಬ್ಬ ಶ್ರೀಮಂತನು ರವಿದಾಸರಿಗೆ ಒಂದು ಸ್ಪರ್ಶಮಣಿಯನ್ನು ಕೊಟ್ಟನು. ಇದರ ಸ್ಪರ್ಶದಿಂದ ಯಾವ ಲೋಹ ಬೇಕಾದರೂ ಚಿನ್ನವಾಗಿ ಪರಿವರ್ತನೆಗೊಳ್ಳುತ್ತಿತ್ತು. ರವಿದಾಸರು ಅದನ್ನು ತಿರಸ್ಕರಿಸಿದರು. ಶ್ರೀಮಂತನು ಅದನ್ನು ಮನೆಯ ಮಾಳಿಗೆಗೆ ನೇತುಹಾಕಿ ಹೊರಟುಹೋದನು. ಒಂದು ವರ್ಷದ ನಂತರ ತಿರುಗಿ ಬಂದನು. ರವಿದಾಸರು ಇನ್ನೂ ತಮ್ಮ ಬಡ ಗುಡಿಸಲಿನಲ್ಲಿಯೇ ವಾಸವಾಗಿದ್ದರು. ತಮ್ಮ ಕಾಯಕವನ್ನು ಮಾಡುತ್ತ ಭಗವದಾನಂದದಲ್ಲಿ ಮುಳುಗಿಹೋಗಿದ್ದರು. ಸ್ಪರ್ಶಮಣಿ ಎಲ್ಲಿ ಹೋಯಿತು ಎಂದು ಶ್ರೀಮಂತನು ಅತ್ತಿತ್ತ ನೋಡಿದನು. ಅವನು ಒಂದು ವರ್ಷದ ಹಿಂದೆ ಎಲ್ಲಿ ನೇತುಹಾಕಿದ್ದನೋ, ಅಲ್ಲಿಯೇ ಅದು ನೇತಾಡುತ್ತಿತ್ತು. ಸಂತ ರವಿದಾಸರು ನಿಜಕ್ಕೂ ಮಹಾತ್ಮರು, ದೈವೀಪುರುಷರು ಎಂದು ಆ ಶ್ರೀಮಂತನು ಎಲ್ಲೆಡೆ ಘೋಷಿಸಿದನು.

## ಚಿತ್ತೋರಿನಲ್ಲಿ ರವಿದಾಸರು

ರವಿದಾಸರ ನಿಃಸ್ವಾರ್ಥ ಭಕ್ತಿ ಮತ್ತು ಮಾನವತೆಯ ಮೇಲಿನ ಅವ್ಯಾಜ ಪ್ರೀತಿ – ಇವು ಎಲ್ಲೆಡೆ ಪ್ರಸಿದ್ಧಿಗೆ ಬಂದಿತು. ಇದನ್ನು ಕೇಳಿ ಚಿತ್ತೋರಿನ ಮಹಾರಾಣಿ ಜಾಲಿ ಅವರ ದರ್ಶನವನ್ನು ಮಾಡಲು ಬಂದಳು. ಅವಳು ಒಬ್ಬ ದೊಡ್ಡ ಭಕ್ತೆ. ಕಾಶಿಯ ಇನ್ನಿತರ ದೇಗುಲಗಳಿಗಿಂತ ರವಿದಾಸರ ಬಡ ಗುಡಿಸಲೇ ಅವಳಿಗೆ ಪ್ರಮುಖ ತೀರ್ಥಕ್ಷೇತ್ರವಾಯಿತು. ರವಿದಾಸರು ಆಶೀರ್ವಾದ ಪೂರ್ವಕವಾಗಿ ಹಲವಾರು ಭಕ್ತಿಗೀತೆಗಳನ್ನು ಹಾಡಿ ಅವಳನ್ನು ಸಂತೋಷಪಡಿಸಿದರು. ರವಿದಾಸರ ಭಕ್ತಿಭಾವವನ್ನು ಕಂಡು ಅವಳು ಬಹಳ ಆಕರ್ಷಿತಳಾದಳು. ಅವರನ್ನು ಚಿತ್ತೋರಿಗೆ ಆಹ್ವಾನಿಸಿದಳು. ಅವರ ಶಿಷ್ಯೆಯಾದಳು. ಸರಳ ಜೀವನವನ್ನು ನಡೆಸಲಾರಂಭಿಸಿದಳು. ಇದನ್ನು ಕಂಡು ಅವಳ ಪತಿ ಮಹಾರಾಣ ಕೋಪಗೊಂಡನು. ರವಿದಾಸರ ಭಕ್ತಿಗೀತೆಗಳನ್ನು ಹಾಡಿ, ಮಹಾರಾಣಿಯು ತನ್ನ ಪತಿಯನ್ನು ಸಮಾಧಾನ ಮಾಡಿದಳು. ಅಲ್ಲಿನ ಬ್ರಾಹ್ಮಣರು ಕೂಡ ರವಿದಾಸರನ್ನು ವಿರೋಧಿಸಿದರು. ಒಮ್ಮೆ ರವಿದಾಸರು ಭೋಜನದಲ್ಲಿ ಪಾಲ್ಗೊಳ್ಳುವುದನ್ನು ಅವರೆಲ್ಲ ಖಂಡಿಸಿದರು. ರವಿದಾಸರು ತಾವಾಗಿಯೇ ಭೋಜನಕೂಟದಿಂದ ಹಿಂದುಳಿದರು. ಆಶ್ಚರ್ಯವೆಂದರೆ, ಬಡಿಸುವವರೆಲ್ಲರೂ ರವಿದಾಸರ ರೂಪದಲ್ಲಿಯೇ ಬ್ರಾಹ್ಮಣರಿಗೆ ಕಂಡುಬಂದರಂತೆ! ಇಷ್ಟೇ ಅಲ್ಲ, ತಮ್ಮ ಅಕ್ಕಪಕ್ಕದಲ್ಲಿ ಕುಳಿತಿರುವವರೆಲ್ಲರೂ ರವಿದಾಸರಂತೆಯೇ ಅವರಿಗೆ ಕಾಣಿಸಿದರಂತೆ! ಇದು ಮಹಾರಾಣನಿಗೆ ತಿಳಿದುಬಂತು. ಅವನು ಕೂಡ ರವಿದಾಸರ ಶ್ರದ್ಧಾವಂತ ಭಕ್ತನಾದನು. ರವಿದಾಸರು ಚಿತ್ತೋರಿನಲ್ಲಿ ಬಹಳ ದಿವಸಗಳ ಕಾಲ ಉಳಿದುಕೊಂಡರು. ಅದೇ ಸಮಯದಲ್ಲಿ ಭಕ್ತೆ ಮೀರಾಬಾಯಿ ಕೂಡ ಅವರ ಶಿಷ್ಯೆಯಾದಳು.

## ಕವಿಯಾಗಿ ರವಿದಾಸರು

ರವಿದಾಸರ ರಚನೆಗಳ ಎರಡು ಮೂಲಕ ಆಕರಗಳೆಂದರೆ, ಸಿಖ್ ಜನಾಂಗದವರ **'ಗುರುಗ್ರಂಥ ಸಾಹಿಬ್'** ಮತ್ತು ದಾದು ಪಂಥಿಗಳು ಎಂಬ ಹಿಂದೂ ಸಂನ್ಯಾಸಿ ಪಂಗಡದ **'ಪಂಚವಾಣಿ'** ಎಂಬ ಗ್ರಂಥ. ಗುರುಗ್ರಂಥ ಸಾಹಿಬ್‌ನಲ್ಲಿ ರವಿದಾಸರ ನಲುವತ್ತು ರಚನೆಗಳನ್ನು ಸೇರಿಸಲಾಗಿದೆ. ರವಿದಾಸರ ಈ ರಚನೆಗಳಲ್ಲಿ ಹಲವಾರು ವಿಷಯಗಳನ್ನು ಕಾಣಬಹುದು. ಸಂಘರ್ಷ ಮತ್ತು ದುರಾಡಳಿತಗಳನ್ನು ಮೆಟ್ಟಿ ನಿಲ್ಲುವುದು, ಯುದ್ಧ ಮತ್ತು ಅದಕ್ಕಾಗಿ ಪರಿಹಾರ, ಒಳ್ಳೆಯ ಉದ್ದೇಶಕ್ಕೆ ಜೀವನವನ್ನು ಮುಡಿಪಾಗಿಡುವ ಭಾವನೆ – ಇವೆಲ್ಲ ವಿಷಯಗಳನ್ನು ಅವರ ರಚನೆಗಳಲ್ಲಿ ಕಾಣಬಹುದು. ಇದಲ್ಲದೆ, ಎಲ್ಲರನ್ನೂ ಸಮಾನವಾಗಿ ಕಾಣುವ ಆದರ್ಶರಾಜ್ಯದ ಕಲ್ಪನೆಯೂ ಅವರ ರಚನೆಗಳಲ್ಲಿ ಬಿಂಬಿತವಾಗಿದೆ. ಯೋಗಿಯ ಲಕ್ಷಣಗಳು, ವೈರಾಗ್ಯದ ಮಹತ್ವ – ಇಂಥ ಆಧ್ಯಾತ್ಮಿಕ ಸಂಗತಿಗಳನ್ನು ಕೂಡ ರವಿದಾಸರು ತಮ್ಮ ರಚನೆಗಳಲ್ಲಿ ವಿವರಿಸುತ್ತಾರೆ.

ಹಲವು ಪಾಶ್ಚಾತ್ಯ ವಿದ್ವಾಂಸರು ರವಿದಾಸರ ಜೀವನದ ಸಾಂಕೇತಿಕತೆಯನ್ನು ಕುರಿತು ಅಧ್ಯಯನ ಮಾಡಿದ್ದಾರೆ. ಅವರಲ್ಲಿ ಪೀಟರ್ ಫ್ರೈಡ್ ಲ್ಯಾಂಡ್‌ಲರ್ ಅವರು ಕೂಡ ಒಬ್ಬರು. ಅವರ ಪ್ರಕಾರ, ರವಿದಾಸರ ಜೀವನಚರಿತ್ರೆಗಳು ಭಾರತೀಯ ಸಮಾಜದಲ್ಲಿನ ಜಾತೀಯ ಸಂಘರ್ಷದ ಸಂಕೇತವಾಗಿವೆ. ಅಲ್ಲದೆ ಹಲವಾರು ಸಾಮಾಜಿಕ ಮತ್ತು ಆಧ್ಯಾತ್ಮಿಕ ವಿಚಾರಗಳನ್ನು ಅವು ವ್ಯಕ್ತಪಡಿಸುತ್ತವೆ. ರವಿದಾಸರ ಜೀವನವು ಆಗಿನ ಕಾಲದ ಜಾತೀಯ ಕಲಹ ಮತ್ತು ಸಾಮಾಜಿಕ ಐಕಮತ್ಯದ ಆಕಾಂಕ್ಷೆಯ ದ್ಯೋತಕವಾಗಿದೆ. ಇನ್ನೊಂದು ನೆಲೆಯಲ್ಲಿ ನೋಡುವುದಾದರೆ, ರವಿದಾಸರ ಬಗೆಗಿನ ಅನೇಕ ಕತೆಗಳು ವ್ಯಕ್ತಿಯೊಬ್ಬನು ಆತ್ಮಸಾಕ್ಷಾತ್ಕಾರ ಮಾಡಿಕೊಳ್ಳಲು ನಡೆಸುವ ಆಧ್ಯಾತ್ಮಿಕ ಸಂಘರ್ಷವನ್ನು ಪ್ರತಿನಿಧಿಸುತ್ತವೆ ಎಂದು ಈ ಪಂಡಿತರು ಅಭಿಪ್ರಾಯಪಡುತ್ತಾರೆ.

ರವಿದಾಸರು ಒಬ್ಬ ಅನುಭಾವಿ. ಭಗವಂತನ ರಾಜ್ಯದಲ್ಲಿ ಆನಂದವಾಗಿ ವಿಹರಿಸುತ್ತಿತ್ತು ಅವರ ಮನಸ್ಸು. ಭಗವಂತನ ಸೌಂದರ್ಯಕ್ಕೆ ಮಾರುಹೋದ ಅವರು, ಪ್ರಾಪಂಚಿಕ ವಿಷಯಗಳಲ್ಲಿ ಸಂಪೂರ್ಣ ನಿರ್ಲಿಪ್ತರಾಗಿದ್ದರು. ಅವರ ಹೃದಯದ ಮಧುರ ಭಾವನೆಗಳು ಕಾವ್ಯಧಾರೆಯ ರೂಪದಲ್ಲಿ ಸೊಗಸಾಗಿ ಹೊರಹೊಮ್ಮಿದವು. ಅವುಗಳಲ್ಲಿ ಕೆಲವೊಂದನ್ನು ನೋಡೋಣ:

'ಭಗವನ್ನಾಮವೊಂದೇ ಸತ್ಯ, ಓ ರವಿದಾಸ, ಆದಿಯಲ್ಲಿ ಇದೊಂದೇ ಸತ್ಯವಾಗಿತ್ತು. ಕಡೆಯ ತನಕ ಇದೊಂದೇ ಸತ್ಯವಾಗಿ ಉಳಿದಿರುತ್ತದೆ. ಇದು ಎಲ್ಲ ಪಾಪಗಳನ್ನೂ ಸಂಕಷ್ಟಗಳನ್ನೂ ನಾಶಮಾಡಿಬಿಡುತ್ತದೆ. ಹಾಗೆಂದೇ ಇದು ಅಪಾರ ಆನಂದದ ಗಣಿಯಾಗಿದೆ. ಓ ರವಿದಾಸ, ಈ ಭಗವನ್ನಾಮದ ಧ್ಯಾನದಲ್ಲಿ ಮನಸ್ಸನ್ನು ಏಕಾಗ್ರಗೊಳಿಸಿ ಭಕ್ತಿಭಾವವನ್ನು ಬೆಳೆಸಿಕೋ. ಭಗವಂತನ ನಾಮದ ಪುನರುಚ್ಚಾರವು ತಾನೇತಾನಾಗಿ ನಿನ್ನ ಮನಸ್ಸಿನಲ್ಲಿ ನಿರಂತರವಾಗಿ ನಡೆಯುತ್ತಿರಲಿ. ಯಾವಾಗ ಏಕಾಗ್ರತೆಯು ಭಗವನ್ನಾಮದಲ್ಲಿ ನಮ್ಮನ್ನು ವಿಲೀನಗೊಳ್ಳುವಂತೆ ಮಾಡುತ್ತದೆಯೋ ಆಗ ಮಾತ್ರ ನಾವು ಪರಮಾನಂದವನ್ನು ಪಡೆಯಬಹುದು. ಆಗ ಮಾತ್ರ ದಿವ್ಯತೆಯ ಬೆಳಕು ಅಂತರಂಗದಲ್ಲಿ ಮೂಡುತ್ತದೆ. ಓ ರವಿದಾಸ, ಆಗ ಮಾತ್ರ ಆನಂದದ ಲಹರಿ ಎಲ್ಲೆಡೆ ಹರಿಯುತ್ತದೆ.'

ಇನ್ನೊಂದು ಕಾವ್ಯದಲ್ಲಿ ಭಗವಂತ ಮತ್ತು ಭಕ್ತನ ಅಪೂರ್ವ ಮಿಲನ ಮತ್ತು ಅಭೇದದ ಕಲ್ಪನೆಯನ್ನು ರವಿದಾಸರು ಬಹು ಸುಂದರವಾಗಿ ಬಿಂಬಿಸುತ್ತಾರೆ:

'ನೀನೇ ನಾನು; ನಾನೇ ನೀನು – ನಮ್ಮಿಬ್ಬರಲ್ಲಿ ಇರುವ ವ್ಯತ್ಯಾಸವಾದರೂ ಏನು? ನೀನು ಚಿನ್ನದಂತೆ, ನಾನು ಅದರಿಂದ ಮಾಡಿದ ಬಳೆಯಂತೆ; ನೀನು ನೀರಿನಂತೆ, ನಾನು ಅದರ ಅಲೆಯಂತೆ. ಓ ಪ್ರಭೂ, ನಾನು ಪಾಪಗಳನ್ನೇ ಮಾಡಿಲ್ಲವಾದರೆ, ನೀನು 'ಪಾಪ-ಹರಣ' ಎಂಬ ಹೆಸರನ್ನು ಹೇಗೆ ತಾನೇ ಪಡೆ

ಯುವೆ? ನೀನು ನನ್ನ ಒಡೆಯ, ನನ್ನಂತರಂಗವನ್ನು ತಿಳಿದವನು, ನನ್ನ ಹೃದಯವನ್ನು ಅನ್ವೇಷಿಸುವವನು. ದಾಸನನ್ನು ಅವನ ಒಡೆಯನಿಂದ ಗುರುತಿಸುತ್ತಾರೆ. ಒಡೆಯನನ್ನು ಅವನ ದಾಸನಿಂದ ಗುರುತಿಸುತ್ತಾರೆ. ಓ ಪ್ರಭೂ, ನನ್ನ ಕಾಯವನ್ನು ನಿನ್ನ ಸೇವೆಗೆ ಮುಡಿಪಾಗಿಡುವ ಹಾಗೆ ಜ್ಞಾನವನ್ನು ನನಗೆ ದಯಪಾಲಿಸು. ಓ ರವಿದಾಸ, ಪರಮಾತ್ಮನು ಎಲ್ಲರಲ್ಲಿಯೂ ಸಮಾನವಾಗಿಯೇ ಇದ್ದಾನೆ ಎಂದು ಅರಿತವರು ನಿಜಕ್ಕೂ ವಿರಳ.'

'ಭಗವಂತನ ಊರು' ಎಂದು ಹೆಸರು ಕೊಟ್ಟಿರುವ ಇನ್ನೊಂದು ಪದ್ಯವಂತೂ ಬಹಳ ಹೃದಯಸ್ಪರ್ಶಿಯಾಗಿದೆ:

'ನನ್ನ ಊರಿನ ಹೆಸರು 'ದುಃಖಿಸದಿರು' ಎಂದು. ನೋವು ಭಯಗಳು ಎಂದಿಗೂ ಪ್ರವೇಶಿಸುವುದಿಲ್ಲ ಇಲ್ಲಿ. ಯಾವ ಸಂಪತ್ತೂ ಇಲ್ಲದೆ, ಜೀವನವು ತೆರಬೇಕಾದ ಯಾವ ತೆರಿಗೆಗಳೂ ಇಲ್ಲದ ಊರು ಇದು. ವ್ಯಾಧಿ ಮರಣಗಳ ಕಾಟ ಇಲ್ಲಿಲ್ಲ. ಇದು ನನ್ನ ಮನೆ. ಸುತ್ತಿ ಸುತ್ತಿ ನಾನಿಲ್ಲಿಗೆ ಬಂದಿರುವೆ. ಕಾಲಚಕ್ರ ಇಲ್ಲಿಲ್ಲ, ಸ್ಥಿತಿಗತಿಗಳ ಏರುಪೇರಿಲ್ಲ. ಇಲ್ಲಿ ನನ್ನ ಚಕ್ರವರ್ತಿ ಆಳುತ್ತಿದ್ದಾನೆ. ಅವನಿಗೆ ಎರಡನೆಯವರಾರೂ ಇಲ್ಲ, ಮೂರನೆಯವರೂ ಇಲ್ಲ. ಇಲ್ಲಿ ಎಲ್ಲರೂ ಪ್ರೀತಿ ಮತ್ತು ಅರಿವಿನಿಂದ ತುಂಬಿ ತುಳುಕಾಡುತ್ತಿದ್ದಾರೆ. ಇಲ್ಲಿನ ಜನರು ಹೃದಯದ ಸಂಪತ್ತಿನಿಂದ ಬಹು ಧನಿಕರಾಗಿದ್ದಾರೆ. ಇದು ಭಗವಂತನ ಪಟ್ಟಣ. ಇಲ್ಲಿನ ಜನರೆಲ್ಲರೂ ಮುಕ್ತರು. ಬಡ ಚಮ್ಮಾರನಾದ ಓ ರವಿದಾಸ, ಕೇಳಿಸಿಕೋ. ಇಲ್ಲಿ ಎಲ್ಲರೂ ನಿನ್ನ ಸ್ನೇಹಿತರೇ, ಬಂಧುಗಳೇ.'

ಹೀಗೆ ತಮ್ಮ ಅದ್ಭುತ ಸುಂದರ ಭಗವದನುಭವದ ಸ್ಥಿತಿಯನ್ನು ರವಿದಾಸರು ಸಾಂಕೇತಿಕವಾಗಿ ತಮ್ಮ ಹಾಡುಗಳಲ್ಲಿ ವ್ಯಕ್ತಪಡಿಸಿದ್ದಾರೆ. ಈ ಕಾವ್ಯಗಳನ್ನು ಓದುವಾಗಲೇ ನಮಗೆ ಅದೆಷ್ಟು ಆನಂದವಾಗುತ್ತದೆ! ಇನ್ನು ಈ ಭಾವನೆಗಳು ಹೊರಹೊಮ್ಮಿದ ರವಿದಾಸರ ಆ ಭಕ್ತ ಹೃದಯವು ಅದೆಷ್ಟು ಪರಿಶುದ್ಧವಾಗಿರಬೇಕು! ಭಗವದಾನಂದದಿಂದ ತುಂಬಿತುಳುಕಾಡುತ್ತಿದ್ದಿರಬೇಕು!

### ರವಿದಾಸರ ತತ್ತ್ವಜ್ಞಾನ

ರವಿದಾಸರ ಗೀತೆಗಳಲ್ಲಿ ಸಗುಣ ಮತ್ತು ನಿರ್ಗುಣ – ಹೀಗೆ ಎರಡು ಪ್ರಕಾರದ ದೇವರ ಪ್ರಸ್ತಾಪವೂ ಬರುತ್ತದೆ. ಇದಲ್ಲದೆ ನಾಥ ಸಂಪ್ರದಾಯದ ಯೋಗಸಾಧನೆಯ ತತ್ತ್ವಗಳೂ ಅವರ ಗೀತೆಗಳಲ್ಲಿ ಅಡಕವಾಗಿವೆ. ಅವರು 'ಸಹಜ' ಎಂಬ ಅನುಭಾವಿಕ ಸ್ಥಿತಿಯನ್ನು ಮತ್ತೆ ಮತ್ತೆ ತಮ್ಮ ಗೀತೆಗಳಲ್ಲಿ ಉಲ್ಲೇಖಿಸುತ್ತಾರೆ. ಇದೊಂದು ಭಗವಂತನ ಮಿಲನದ ಸ್ಥಿತಿ. ಬಹುತ್ವ ಮತ್ತು ಏಕತ್ವಗಳ ಅಪೂರ್ವ ಸಂಯೋಗದ ಅನುಭವ ಇಲ್ಲಾಗುತ್ತದೆ. ಇದರ ವಿವರಣೆಯನ್ನು ತಮ್ಮ ಒಂದು ಪದ್ಯದಲ್ಲಿ ರವಿದಾಸರು ಹೀಗೆ ನೀಡುತ್ತಾರೆ: 'ಈ ಅನುಭವ ಹೇಗಿದೆಯೆಂದರೆ, ಅದನ್ನು ಮಾತುಗಳಲ್ಲಿ ಹೇಳಲು ಆಗುವುದಿಲ್ಲ. ನಾನು ಭಗವಂತನನ್ನು ದರ್ಶಿಸಿದ್ದೇನೆ. ಇಷ್ಟನ್ನು ಮಾತ್ರ ಹೇಳಬಲ್ಲೆ. ಇನ್ನೇತರ ಭಯ ನನಗೆ? ಹರಿಯೇ ಎಲ್ಲೆಡೆ ಇದ್ದಾನೆ. ಎಲ್ಲವೂ ಹರಿಯೇ ಆಗಿದ್ದಾನೆ. ಹರಿಯನ್ನು ಮತ್ತು ಹರಿಯೇ ತನ್ನ ಆತ್ಮ ಎನ್ನುವುದನ್ನೂ ತಿಳಿದವನಿಗೆ ಬೇರೆ ಯಾವ ಪುರಾವೆಯೂ ಬೇಡ. ಏಕೆಂದರೆ ಅದನ್ನು ತಿಳಿದುಕೊಳ್ಳಲು ಇಚ್ಛಿಸುವವನೇ ಅದರಲ್ಲಿ ವಿಲೀನವಾಗಿರುತ್ತಾನೆ.'

ನಿರ್ಗುಣ ತತ್ತ್ವವನ್ನೇ ಭಗವಂತನೆಂದು ರವಿದಾಸರು ಎಣಿಸಿದ್ದರೂ, ಅಂಥ ಭಗವದ್ರೂಪದ ಮೇಲೆ ಎಣೆಯಿಲ್ಲದ ಪ್ರೇಮ ಪ್ರವಾಹವನ್ನು ಅವರು ಹರಿಸಿರುವುದನ್ನು ಅವರ ಕವನಗಳಲ್ಲಿ ಕಾಣಬಹುದು. ಇಂಥ ಭಕ್ತಿಯನ್ನು 'ನಿರ್ಗುಣ ಭಕ್ತಿ' ಎಂದು ಕರೆಯಬಹುದು. ಸಿಖ್ ಸಂಪ್ರದಾಯದವರು ಉದಾಹರಿಸುವ ರವಿದಾಸರ ಗೀತೆಗಳಲ್ಲಿ ಈ ಅಂಶವೇ ಮುಖ್ಯವಾಗಿ ಕಂಡುಬರುತ್ತದೆ. ಹಾಗೆಂದು ಈ ನಿರ್ಗುಣ ತತ್ತ್ವವು ಅದ್ವೈತ ತತ್ತ್ವವಲ್ಲ; ಅದು ವಿಶಿಷ್ಟ ಈಶ್ವರ ತತ್ತ್ವ. ಅಂಥ ಈಶ್ವರನು ಕರುಣಾಳು, ಸರ್ವವ್ಯಾಪಿ, ಹಲವಾರು ಅವತಾರಗಳನ್ನು ತಳೆಯುವಂಥವನು. ಅವನ ಸಾನ್ನಿಧ್ಯವನ್ನು ಎಲ್ಲೆಡೆ ಕಾಣಬಹುದು. ಎಲ್ಲರಲ್ಲಿಯೂ ಅನುಭವಿಸಬಹುದು. ಹೀಗೆ ನಿರ್ಗುಣ ಹಾಗೂ ಸಗುಣ ತತ್ತ್ವಗಳ ಅಪೂರ್ವ ಸಂಗಮವನ್ನು ರವಿದಾಸರ ಗೀತೆಗಳಲ್ಲಿ ನಾವು ಕಾಣಬಹುದು. ಆದರೆ ಈ ವಿಷಯದಲ್ಲಿ ವಿದ್ವಾಂಸರುಗಳ ಮಧ್ಯೆ ಭಿನ್ನಾಭಿಪ್ರಾಯವಿದೆ.

ಇತ್ತೀಚಿಗೆ, ಅಂದರೆ ೨೧ನೆಯ ಶತಮಾನದಲ್ಲಿ (೨೦೦೯) ರವಿದಾಸರ ಅನುಯಾಯಿಗಳೆಂದು ಹೇಳಿಕೊಳ್ಳುವ ಕೆಲವರು 'ರವಿದಾಸ ಧಾರ್ಮಿಕ ಪಂಗಡ' ವನ್ನು ಹುಟ್ಟುಹಾಕಿಕೊಂಡಿದ್ದಾರೆ. ಇದು ಮುಖ್ಯವಾಗಿ ದಲಿತರ ಪಂಗಡವಾಗಿದ್ದು, ತಮಗೆ ಪ್ರತ್ಯೇಕ ಸಾಮಾಜಿಕ ಹಾಗೂ ಧಾರ್ಮಿಕ ಅಸ್ತಿತ್ವವಿದೆ ಎಂದು ಅವರು ಪ್ರತಿಪಾದಿಸುತ್ತಾರೆ.

### ರವಿದಾಸರ ಅಂತ್ಯ

ರವಿದಾಸರು ಅಂತ್ಯಕಾಲದಲ್ಲಿ ತಮ್ಮ ಪಾದಚಿಹ್ನೆಗಳನ್ನು ಮಾತ್ರ ಬಿಟ್ಟು ಅಂತರ್ಧಾನರಾದರು ಎಂಬ ನಂಬಿಕೆ ಇದೆ. ಈ ಪಾದಚಿಹ್ನೆಗಳನ್ನು ಇಂದಿಗೂ ಚಿತ್ತೋರಿನ ಅವರ ಸ್ಮಾರಕ ಮಂದಿರದಲ್ಲಿ ರಕ್ಷಿಸಿಡಲಾಗಿದೆ. ಕೆಲವರು ರವಿದಾಸರು ತಮ್ಮ ಅಂತಿಮ ದಿನಗಳನ್ನು ಕಾಶಿಯಲ್ಲಿಯೇ ಕಳೆದರು ಎಂದು ಹೇಳುತ್ತಾರೆ. ಏನೇ ಇರಲಿ, ಅವರು ಸುಮಾರು ೧೫೨ ವರ್ಷಗಳ ಕಾಲ ಸುದೀರ್ಘ ಜೀವನವನ್ನು ನಡೆಸಿ ೧೫೨೮ ರಲ್ಲಿ ದೇಹತ್ಯಾಗ ಮಾಡಿದರು ಎಂಬ ಐತಿಹ್ಯ ಇದೆ. ಇದು ನಂಬಲು ಕಷ್ಟ. ದೇಶದಾದ್ಯಂತ ಅವರ ಸ್ಮಾರಕ ಮಂದಿರಗಳಿವೆ. ಅವುಗಳಲ್ಲಿ ಒಂದು ತಿರುಪತಿಯ ಬೆಟ್ಟದ ಬುಡದಲ್ಲಿದೆ. ಇನ್ನೊಂದು ಕಾಶಿಯ ಮಂದೂರ್ ಪ್ರದೇಶದಲ್ಲಿದೆ. ಎಲ್ಲೋರಾದ ಬಳಿ ರವಿದಾಸರ ಕೊಳವಿದೆ. ಇಂಥದ್ದೇ ಒಂದು ಕೊಳ ಗುಜರಾತಿನ ಜುನಾಗಢದಲ್ಲಿಯೂ ಇದೆ.